


# ಉ.....................ದ್ದನೆಯ ಬೈಕ್!

ಇಲ್ಲೊಬ್ಬ ಹತ್ತಾರು ಮಂದಿ ಕುಳಿತುಕೊಳ್ಳಬಲ್ಲ ಉದ್ದನೆಯ ಬೈಕ್ ಒಂದನ್ನು ತಯಾರಿಸಿದ್ದಾನೆ!

31ರ ಹರೆಯದ ಕಾಲಿನ್ ಫರ್ಜ್, ಲಿಂಕನ್‌ಶೈರ್‌ನಲ್ಲಿ ಕೊಳಾಯಿ ರಿಪೇರಿ ಕೆಲಸ ಮಾಡುವವ. ತನ್ನ ಮನೆ ಹಿತ್ತಿಲಲ್ಲೇ ಬರೋಬ್ಬರಿ 22 ಮೀಟರ್ (72 ಅಡಿ) ಉದ್ದದ ಬೈಕ್ ಅನ್ನು ನಿರ್ಮಿಸಿ ಗಿನ್ನಿಸ್ ವಿಶ್ವದಾಖಲೆ ಮಾಡಲು ಮುಂದಾಗಿದ್ದಾನೆ. 125 ಸಿ.ಸಿ ಸಾಮರ್ಥ್ಯದ ಒಂದೂವರೆ ಮೊಪೆಡ್‌ಗಳನ್ನು ಬಳಸಿಕೊಂಡು ಹಾಗೂ ಉದ್ದನೆಯ ಅಲ್ಯೂಮಿನಿಯಮ್ ಫ್ರೇಮ್‌ಅನ್ನು ಜೋಡಿಸಿ ಈ ಉದ್ದನೆಯ ಬೈಕನ್ನು ಈತ ನಿರ್ಮಿಸಿದ್ದಾನೆ.

ಸಾಲ್ಟ್ ಬೇ ವಿಮಾನ ನಿಲ್ದಾಣದ ರನ್‌ವೇನಲ್ಲಿ 23ಕ್ಕೂ ಹೆಚ್ಚು ಬೈಕ್ ಪ್ರೇಮಿಗಳನ್ನು ಹಿಂದೆ ಕೂರಿಸಿಕೊಂಡು ಗಂಟೆಗೆ 35 ಮೈಲು ವೇಗದಲ್ಲಿ, ಒಂದು ಕಿ.ಮಿ.ಗೂ ಹೆಚ್ಚು ದೂರದವರೆಗೆ ಈತ ಸವಾರಿ ಮಾಡಿದ್ದಾನೆ. ಸ್ವಲ್ಪ ಬೈಕ್‌ನ ಸಸ್ಪೆನ್ಷನ್ ಮಾರ್ಪಾಟು ಮಾಡಿದರೆ ಇನ್ನೂ ಹೆಚ್ಚಿನ ಜನರನ್ನು ಕರೆದೊಯ್ಯಬಹುದಂತೆ.

ಈ ಬೈಕ್ ಅತ್ಯಂತ ಭಾರವಿದೆ. ಗಂಟೆಗೆ 35 ಮೈಲಿ ಎಂದರೂ ಸ್ಪೀಡ್ ಕಮ್ಮಿ. ಈ ಸ್ಪೀಡ್‌ನಲ್ಲಿ ಇದನ್ನು ಬ್ಯಾಲೆನ್ಸ್ ಮಾಡಿ ಓಡಿಸುವುದು ಸ್ವಲ್ಪ ಕಷ್ಟ. ಹಾಗಾಗಿ ಇದಕ್ಕಿಂತ ಉದ್ದನೆಯ ಬೈಕ್ ನಿರ್ಮಿಸಲು ಬಹುಶಃ ಸಾಧ್ಯವಾಗಲಿಕ್ಕಿಲ್ಲ. ಈ ಬೈಕ್ ಬಹಳ ಸಮಯದ ಕಾಲ ದಾಖಲೆಯಾಗಿಯೇ ಉಳಿಯುತ್ತದೆ' ಎಂದು ಬೈಕ್ ಸವಾರಿಯ ಸಾಹಸದ ನಂತರ ಕಾಲಿನ್ ನುಡಿದಿದ್ದಾನೆ. ಕಾಲಿನ್ ಈಗಾಗಲೆ ಅತ್ಯಂತ ವೇಗವಾಗಿ (ಗಂಟೆಗೆ 71 ಮೈಲಿ ವೇಗದಲ್ಲಿ) ಓಡುವ ಬೈಕ್ ಒಂದನ್ನು ನಿರ್ಮಿಸಿ ಗಿನ್ನಿಸ್ ವಿಶ್ವದಾಖಲೆ ಮಾಡಿದ್ದಾನೆ. ಈಗ ಉದ್ದನೆಯ ಬೈಕ್ ತಯಾರಿಸಿದ್ದಾನೆ. ಈಗಿರುವ ಗಿನ್ನೆಸ್ ದಾಖಲೆ ಪ್ರಕಾರ 14 ಮೀಟರ್ ಉದ್ದದ ಬೈಕ್ ಪ್ರಪಂಚದಲ್ಲೇ ಅತಿ ಉದ್ದನೆಯ ಬೈಕ್.

■ ವಿದ್ಯಾ ವಿ ಹಾಲಭಾವಿ

